# ಇದು ಅದ್ವೈತವೆ?

ಶ್ರೀ ಮಧ್ವಾಚಾರ್ಯರು ತಮ್ಮ ಮಹಾಭಾರತ ತಾತ್ಪರ್ಯ ನಿರ್ಣಯ ಗ್ರಂಥದಲ್ಲಿ ಈ ಶ್ಲೋಕವನ್ನು ರಚಿಸಿದ್ದಾರೆ:

तत्रापरांश्चैव बहूनसत्यं निरीश्वरं चाप्रतिष्ठं च लोकम् ।
सिद्धोऽहमीशोऽहमिति ब्रुवाणान् गुणान् विष्णोः ख्यापयन् वादतोऽजैत् । २२.२८४ । [22.301]
भिन्नं विष्णुमधिकं सर्वतश्च ब्रुवन् प्रवीरान् लक्षमेषां निजघ्ने ।

ಇದರ ಅರ್ಥ: ಅಲ್ಲಿ (ಸೌಗಂಧಿಕ ವನದಲ್ಲಿ) ಬೇರೆ ಅನೇಕರನ್ನು, ಹೀಗೆ ಹೇಳುವವರನ್ನು - 'ಈ ಲೋಕವು ಅಸತ್ಯ, ಪ್ರತಿಷ್ಠೆ ಇಲ್ಲದ್ದು, ಕರ್ತೃ ನಿಯಾಮಕನಾದ ಈಶ್ವರನಿಲ್ಲದ್ದು, ನಾನು ಸಿದ್ಧನು, ನಾನು ಈಶ್ವರನು' - ಭೀಮನು ವಿಷ್ಣುವಿನ ಗುಣಗಳನ್ನು ಸಾರುತ್ತ ವಾದದಿಂದ ಜಯಿಸಿ, ವಿಷ್ಣು ಜೀವರಿಗಿಂತ ಭಿನ್ನನು, ಎಲ್ಲಕ್ಕಿಂತ ಅಧಿಕನು ಎಂದು ಹೇಳುತ್ತ ಆ ಲಕ್ಷಾಂತರ ಯೊದ್ಧರನ್ನು ಕೊಂದನು.

ಈ ಶ್ಲೋಕವನ್ನು ನೋಡಿದವರಿಗೆ, ಅವರು ಭ.ಗೀತೆಯ ಪರಿಚಯವುಳ್ಳವರಾದರೆ, ಕೂಡಲೆ ಅಲ್ಲಿಯ 16ನೆ ಅಧ್ಯಾಯದ ಆಸುರೀ ಸಂಪತ್ತಿನ ಶ್ಲೋಕಗಳು ನೆನಪಾಗುತ್ತೆ. ಅಲ್ಲಿಯ ಶ್ಲೋಕಗಳು ಹೀಗಿವೆ:

असत्यमप्रतिष्ठं ते जगदाहुरनीश्वरम्।अपरस्परसम्भूतं किमन्यत्कामहैतुकम्॥ (16.8)
ईश्वरोऽहमहं भोगी सिद्धोऽहं बलवान्सुखी॥ (16.14)

(ಅವರು, ಆಸುರ ಗುಣವುಳ್ಳವರು, ಈ ಜಗತ್ತನ್ನು ಅಸತ್ಯ, ಪ್ರತಿಷ್ಠೆಯಿಲ್ಲದ್ದು, ಈಶ್ವರನಿಲ್ಲದ್ದು, ಕಾಮದಿಂದ ಆದ ಕೂಡಿಕೆಯಿಂದ ಉಂಟಾದದ್ದು...ನಾನು ಈಶ್ವರನು, ಭೋಗಿಸುವನು, ಸಿದ್ಧನು, ಬಲವಂತನು, ಸುಖೀ ಎಂದು ಭಾವಿಸುವರು). (ತಾ.ನಿ.ದ ಆ ಶ್ಲೊಕದ ವ್ಯಾಖ್ಯಾನದಲ್ಲಿ ಭ.ಗೀತೆಯ ಈ ಅಧ್ಯಾಯದ ಉಲ್ಲೇಖ ಮಾಡಿದ್ದಾರೆ.) (ನಂತರದ ಮಣಿಮಂತನ ಬಗ್ಗೆ ಇರುವ ಕಡೆ 22.314 ಒಂದು ವ್ಯಾಖ್ಯಾನದಲ್ಲಿ 'ಹಿಂದೆ ಸೌಗಂಧಿಕ ವನದಲ್ಲಿ ಭೀಮನಿಂದ ಹತರಾದ ಈ ಅಸುರರು ಕಲಿಯಲ್ಲಿ ಜನಿಸಿ ಆ ಮಿಥ್ಯಾ ಮತಿಯನ್ನು ಮಾಯಾವಾದವಾದ ಅಸಚ್ಛಾಸ್ತ್ರದ ಪ್ರಸಾರದಿಂದ ಅಧಿಕವಾದ ತಮಸ್ಸನ್ನು ಹೊಂದಿದರು' ಎಂದು ಹೇಳಿದೆ.)

ಆದರೆ ಅದ್ವೈತದ ಅಲ್ಪ ಸ್ವಲ್ಪ ಪರಿಚಯವಿರುವವರಿಗೆ ಆ ಮೇಲಿನ ತಾ.ನಿ.ದ ಶ್ಲೋಕವನ್ನು ತೋರಿಸಿ 'ಇದು ಅದ್ವೈತದ ಪ್ರಮೇಯಗಳನ್ನು ಹೇಳುವ ಸಾಲುಗಳು' ಎಂದು ಹೇಳಿದಲ್ಲಿ 'ಹೌದಾ, ಇರಬಹುದು' ಎಂಬ ಭಾವನೆ ಮೂಡುತ್ತೆ. ಏಕೆಂದರೆ ಅಲ್ಲಿ 'ಜಗತ್ತನ್ನು ಅಸತ್ಯ, ಈಶ್ವರ ಇಲ್ಲ, ಪ್ರತಿಷ್ಠೆ ಇಲ್ಲ, ನಾನೇ ಈಶ್ವರ' ಎಂಬ ಪ್ರಮೇಯಗಳು ಅದ್ವೈತದ 'ಜಗತ್ತು ಮಿಥ್ಯಾ, ಬ್ರಹ್ಮ ನಿರ್ಗುಣ, ಅಹಂ ಬ್ರಹ್ಮಾಸ್ಮಿ' ಎಂಬ ಪ್ರಮೇಯಗಳನ್ನು ಆಪಾತತಃ ತಿಳಿದವರಿಗೆ ನೆನಪು ಮಾಡುತ್ತೆ. ಈ ರೀತಿಯ ಪ್ರಮೇಯಗಳನ್ನು ಒಪ್ಪಿದವರನ್ನು ಭೀಮ ಕೊಂದನು ಎಂಬ ಭಾವನೆ ಮೂಡುತ್ತೆ.

ಆದರೆ ಅದ್ವೈತ ಶಾಸ್ತ್ರವನ್ನು ಸರಿಯಾಗಿ ಅಧ್ಯಯನ ಮಾಡಿ ವಿಷಯದ ಆಂತರ್ಯವನ್ನು ಚೆನ್ನಾಗಿ ಅರಿತವರಿಗೆ ಆ

ತಾ.ನಿ.ದ ಪ್ರಮೇಯಗಳಿಗೂ ಅದ್ವೈತ ಶಾಸ್ತ್ರದ ಯಥಾರ್ಥಕ್ಕೂ ಮಹದ್ವೈಲಕ್ಷಣ್ಯ ಇರುವುದು ಕೂಡಲೆ ವೇದ್ಯವಾಗುತ್ತೆ. ಆ ವೈಲಕ್ಷಣ್ಯವನ್ನು ಸಾರಿ ತೋರಿಸುವ ನೂರಾರು ಶಾಂಕರ ಮತದ ಪ್ರಸ್ಥಾನತ್ರಯ ಭಾಷ್ಯದ ವಾಕ್ಯಗಳು ನೆನಪಾಗುತ್ತೆ.  ಅವುಗಳಲ್ಲಿ ಕೆಲವನ್ನು ಇಲ್ಲಿ ಕಾಣ ಬಹುದು:

द्वितीयाध्यायप्रभृतिषु विभूत्यन्तेषु अध्यायेषु परमात्मनः ब्रह्मणः अक्षरस्य विध्वस्तसर्वोपाधिविशेषस्य उपासनम् उक्तम् ; सर्वयोगैश्वर्यसर्वज्ञानशक्तिमत्सत्त्वोपाधेः ईश्वरस्य तव च उपासनं तत्र तत्र उक्तम् ।  (ಭ.ಗೀತೆಯ 12ನೆ ಅಧ್ಯಾಯಕ್ಕೆ ಅವತಾರಿಕೆ: 2ನೆ ಅಧ್ಯಾಯದಿಂದ 10ನೆ ಅಧ್ಯಾಯದ ವರೆಗೆ ಸಕಲ ಉಪಾಧಿಗಳೂ ರಹಿತವಾದ  ಪರಮಾತ್ಮನಾದ ಬ್ರಹ್ಮದ ಅಕ್ಷರದ ಉಪಾಸನೆಯು ಹೇಳಲ್ಪಟ್ಟಿತು, ಜೊತೆಗೆ ಸರ್ವ ಯೋಗೈಶ್ವರ್ಯ ಸರ್ವ ಜ್ಞಾನ ಶಕ್ತಿ ಸತ್ತ್ವೋಪಾಧಿಯುಳ್ಳ ಈಶ್ವರನಾದ ನಿನ್ನ ಕುರಿತಾದ ಉಪಾಸನೆಯೂ ಅಲ್ಲಲ್ಲಿ ಉಕ್ತವಾಗಿದೆ.)

भक्त्या माम् अभिजानाति यावान् अहम् उपाधिकृतविस्तरभेदः, यश्च अहम् अस्मि विध्वस्तसर्वोपाधिभेदः उत्तमः पुरुषः आकाशकल्पः, तं माम् अद्वैतं चैतन्यमात्रैकरसम् अजरम् अभयम् अनिधनं तत्त्वतः अभिजानाति । ततः माम् एवं तत्त्वतः ज्ञात्वा विशते तदनन्तरं मामेव ज्ञानानन्तरम् । (ಭ.ಗೀತೆ 18.55 ಭಾಷ್ಯ: ಉಪಾಧಿಯಿಂದಾದ ವಿಸ್ತರ ಭೇದಗಳುಳ್ಳ ನನ್ನನ್ನು ಭಕ್ತಿಯಿಂದ ತಿಳಿಯುತ್ತಾನೆ ಮತ್ತು ಸಕಲ ಉಪಾಧಿಗಳೂ ರಹಿತನಾದ ಉತ್ತಮ ಪುರುಷನಾದ ಆಕಾಶಸದೃಶವಾದ ನನ್ನನ್ನು ಅದ್ವೈತವೂ ಕೇವಲ ಚೈತನ್ಯವೇಯಾದ, ಮುಪ್ಪಿಲ್ಲದ, ಅಭಯವಾದ, ನಾಶವಿಲ್ಲದ ಸ್ವರೂಪವಾಗಿ ತಾತ್ತ್ವಿಕವಾಗಿ ತಿಳಿಯುತ್ತಾನೆ. ಹೀಗೆ ನನ್ನನ್ನು ತಾತ್ತ್ವಿಕವಾಗಿ ತಿಳಿದು ಕೂಡಲೆ (ಕಾಲಾಂತರವಿಲ್ಲದೆ) ನನ್ನನ್ನು  ಹೊಕ್ಕುವನು.

अस्य पुनर्विद्यावतो विध्वस्तोपाधिकृतभेददर्शनस्य विशुद्धविज्ञानघनैकरसमद्वयमात्मानं पश्यतो विजानतो मुनेर्मननशीलस्यात्मस्वरूपं कथं सम्भवतीति, उच्यते — यथा उदकं शुद्धे प्रसन्ने शुद्धं प्रसन्नम् आसिक्तं प्रक्षिप्तम् एकरसमेव नान्यथा, तादृगेव भवति आत्माप्येवमेव भवति एकत्वं विजानतो मुनेः मननशीलस्य हे गौतम । (ಕಠೋಪನಿಷದ್ಭಾಷ್ಯ 2.1.15: ಈ ಅಪರೋಕ್ಷ ಜ್ಞಾನಿಗೆ ಆತ್ಮಸ್ವರೂಪದ ಅರಿವು ಹೇಗೆ ಸಂಭವಿಸುತ್ತೆ ಎಂಬುದನ್ನು ಹೇಳಿದೆ: ಉಪಾಧಿಯಿಂದ ಉಂಟಾದ ಸಕಲ ಭೇದ ದರ್ಶನವೂ ನೀಗಿದ, ವಿಶುದ್ಧ ವಿಜ್ಞಾನಘನರಸವಾದ ಅದ್ವಯವಾದ ತನ್ನ ಆತ್ಮನನ್ನು ನೇರಾಗಿ ತಿಳಿಯುವವನಿಗೆ ಶುದ್ಧವಾದ ಪ್ರಸನ್ನವಾದ ನಿರಿನಲ್ಲಿ  ಸುರಿದ ಶುದ್ಧವಾದ ಪ್ರಸನ್ನವಾದ ನೀರು ಹೇಗೆ ಏಕರಸವಾಗಿಯೇ, ಬೇರಲ್ಲದಾಗಿ ಇರುತ್ತೋ ಹಾಗೆ.)

एवमेकमपि ब्रह्मापेक्षितोपाधिसम्बन्धं निरस्तोपाधिसम्बन्धं चोपास्यत्वेन ज्ञेयत्वेन च वेदान्तेषूपदिश्यत इति प्रदर्शयितुं परो ग्रन्थ आरभ्यते । ಬ್ರಹ್ಮಸೂತ್ರದ ಆನಂದಮಯಾಧಿಕರಣ 1.1.12 ಕ್ಕೆ ಅವತಾರಿಕೆ: ಹೀಗೆ ಬ್ರಹ್ಮವು ಒಂದೇಯಾದರೂ ಅಪೇಕ್ಷಿತ ಉಪಾಧಿ ಸಂಬಂಧವುಳ್ಳದಾಗಿಯೂ, ಯಾವ ಉಪಾಧಿ ಸಂಬಂಧವೂ ಇಲ್ಲದಾಗಿಯೂ, ತನ್ನಿಂದ ಬೇರೆಯಾಗಿ ಉಪಾಸ್ಯವಾಗಿಯೂ (ಸೋಪಾಧಿಕ ಬ್ರಹ್ಮ), ತನ್ನಿಂದ ಅಭಿನ್ನವಾಗಿ ತಿಳಿಯತಕ್ಕದ್ದಾಗಿಯೂ (ನಿರುಪಾಧಿಕ ಬ್ರಹ್ಮ) ಉಪನಿಷತ್ತುಗಳಲ್ಲಿ ಉಪದಿಷ್ಟವಾಗಿದೆ ಎಂಬುದನ್ನು ತೋರಿಸಲು ಈ ಮುಂದಿನ ಅಧಿಕರಣ ಪ್ರವೃತ್ತವಾಗಿದೆ.

अपि च, यत्र तु निरस्तसर्वविशेषं पारमेश्वरं रूपमुपदिश्यते, भवति तत्र शास्त्रम् ‘अशब्दमस्पर्शमरूपमव्ययम्’ (क. उ. १ । ३ । १५) इत्यादि । ಬ್ರಹ್ಮಸೂತ್ರ ಭಾಷ್ಯ 1.1.20 ಉಪನಿಷತ್ತುಗಳಲ್ಲಿ ಎಲ್ಲಿ ಸರ್ವವಿಶೇಷ ರಹಿತವಾದ ಪರಮೇಶ್ವರ ರೂಪದ ಉಪದೇಶವಿದೆಯೋ ಅಲ್ಲಿ ವಾಕ್ಯ ಹೀಗಿರುತ್ತೆ 'ಅಶಬ್ದಮಸ್ಪರ್ಶಮರೂಪಮವ್ಯಯಮ್' ಶಬ್ದ ಸ್ಪರ್ಶ ರೂಪ ಗಂಧ ರಸಗಳಿಲ್ಲದ ನಾಶವಿಲ್ಲದ ವಸ್ತು ಎಂದು (ಕಠೋಪನಿಷತ್ತು 1.3.15)

यत्र हि निरस्तसर्वविशेषसम्बन्धं परं ब्रह्मात्मत्वेनोपदिश्यते, तत्रैकरूपमेव फलं मोक्ष इत्यवगम्यते । यत्र तु गुणविशेषसम्बन्धं प्रतीकविशेषसम्बन्धं वा ब्रह्मोपदिश्यते, तत्र संसारगोचराण्येवोच्चावचानि फलानि दृश्यन्ते — ‘अन्नादो वसुदानो विन्दते वसु य एवं वेद’ (बृ. उ. ४ । ४ । २४) इत्याद्यासु श्रुतिषु । ಬ್ರಹ್ಮಸೂತ್ರ 1.1.24: ಪರ ಬ್ರಹ್ಮವನ್ನು ಸರ್ವವಿಶೇಷಸಂಬಂಧ ರಹಿತವಾಗಿ (ಜೀವನ) ಆತ್ಮವೆಂದು ಉಪನಿಷತ್ತು ಉಪದೇಶಿಸುತ್ತೋ ಅಲ್ಲಿ ಒಂದೇ ರೂಪವಾದ ಫಲವಾಗಿ ಮೋಕ್ಷ ಹೇಳಲಾಗಿದೆ ಎಂದು ತಿಳಿಯಬೇಕು. ಆದರೆ ಎಲ್ಲಿ ಗುಣವಿಶೇಷ ಸಂಬಂಧ ಅಥವಾ ಪ್ರತೀಕವಿಶೇಷ ಸಂಬಂಧವಾಗಿ ಬ್ರಹ್ಮವನ್ನು ಉಪದೇಶಿಸುತ್ತೋ ಅಲ್ಲಿ ಸಂಸಾರಸಂಬಂಧಿ ಫಲವನ್ನೇ ತಾರತಮ್ಯದಿಂದ ಹೇಳಲಾಗಿದೆ ಎಂದು ತಿಳಿಯಬೇಕು. (ಈ ಎರಡನೆಯ ಕಡೆ ಜೀವನನ್ನು ಬ್ರಹ್ಮದೊಡನೆ ಅಭಿನ್ನವಾಗಿ ಉಪದೇಶವಿರುವುದಿಲ್ಲ ಎಂಬುದು ಗಮನಾರ್ಹ).

अपि च एनमात्मानं निरस्तसमस्तप्रपञ्चमव्यक्तं संराधनकाले पश्यन्ति योगिनः; संराधनं च भक्तिध्यानप्रणिधानाद्यनुष्ठानम् । ಬ್ರಹ್ಮಸೂತ್ರ 3.2.24. ಈ ಆತ್ಮನನ್ನು ಸಕಲ ಪ್ರಪಂಚ ಸಂಬಂಧ ರಹಿತನಾಗಿ ಅಳವಾದ ಭಕ್ತಿ, ಧ್ಯಾನ, ಪೂಜೆಗಳ ಅನುಷ್ಠಾನದಲ್ಲಿ ಸಾಕ್ಷಾತ್ಕರಿಸುತ್ತಾರೆ ಯೋಗಿಗಳು. (ಇಲ್ಲಿ ಜೀವನು ಬ್ರಹ್ಮವನ್ನು ಎಂತಹದ್ದಾಗಿ ಸಾಕ್ಷಾತ್ಕರಿಸುತ್ತಾನೆ ಎಂಬುದನ್ನು ತಿಳಿಸಿದ್ದಾರೆ. ಹಾಗಾಗಿ ಮೋಕ್ಷಕ್ಕೆ ಬೇಕಾದ ಜ್ಞಾನದಲ್ಲಿ ಬ್ರಹ್ಮವು ಸಕಲ ವಿಶೇಷ ರಹಿತವಾಗಿಯೇ ಅರಿಯಲ್ಪಡುವುದು ಎಂಬುದು ಗಮನಾರ್ಹ)

ये चान्येऽपि त्यक्तसर्वैषणाः संन्यस्तसर्वकर्माणः यथाविशेषितं ब्रह्म अक्षरं निरस्तसर्वोपाधित्वात् अव्यक्तम् अकरणगोचरम् । ಭ.ಗೀತಾ 12.1 ಭಾಷ್ಯ. ಸಕಲ ಆಶೆಗಳನ್ನೂ (ಅವುಗಳನ್ನು ಹೊಂದಿಸುವ) ಸಕಲ ಕರ್ಮಗಳನ್ನೂ ಸನ್ನ್ಯಾಸ ಮಾಡಿರುವವರು ಅಕ್ಷರವೆಂಬ ಬ್ರಹ್ಮವನ್ನು ಸರ್ವ ಉಪಾಧಿ ರಹಿತವಾದ್ದರಿಂದ ಅವ್ಯಕ್ತವಾಗಿ ಇಂದ್ರಿಯ ಅಗೋಚರವಾಗಿ (ತಿಳಿಯುತ್ತಾರೆ).
सर्वक्षेत्रेषु यः क्षेत्रज्ञः ब्रह्मादिस्तम्बपर्यन्तानेकक्षेत्रोपाधिप्रविभक्तः, तं निरस्तसर्वोपाधिभेदं सदसदादिशब्दप्रत्ययागोचरं विद्धि इति अभिप्रायः । ಭ.ಗೀತಾ 13.2: ಎಲ್ಲ ಶರೀರಗಳಲ್ಲೂ ಯಾವ ಕ್ಷೇತ್ರಜ್ಞನು ಬ್ರಹ್ಮಾದಿ ಸ್ತಂಬಪರ್ಯಂತ ಅನೇಕ ಶರೀರೋಪಾಧಿಗಳಿಂದ ಬೇರೆ ಬೇರೆಯಾಗಿ ತೋರುವನೋ ಅವನನ್ನು ಸರ್ವೋಪಾಧಿ ರಹಿತನಾಗಿ ಸತ್, ಅಸತ್ ಎಂಬ ಶಂದಗಳಿಗೂ ಅವುಗಳ ಪ್ರತ್ಯಯಗಳಿಗೂ ಗೋಚರನಾಗದವನಾಗಿ ನೀನು (ಅರ್ಜುನ) ತಿಳಿ ಎಂದು ಅಭಿಪ್ರಾಯ. (ಮತ್ತೆ ಮತ್ತೆ ಮೋಕ್ಷಕಾರಕ ಜ್ಞಾನವು ಯಾವ ನಿರ್ಗುಣ ಬ್ರಹ್ಮದ ವಿಷಯಕವಾಗಿರಬೇಕೆಂಬುದನ್ನು ತಿಳಿಸುತ್ತವೆ ಈ ಭಾಷ್ಯ ವಾಕ್ಯಗಳು.)

यथाशास्त्रं क्षेत्रक्षेत्रज्ञलक्षणभेदपरिज्ञानपूर्वकं प्राक् दर्शितरूपात् क्षेत्रात् मुञ्जादिव इषीकां यथोक्तलक्षणं क्षेत्रज्ञं प्रविभज्य ‘न सत्तन्नासदुच्यते’ (भ. गी. १३ । १२) इत्यनेन निरस्तसर्वोपाधिविशेषं ज्ञेयं ब्रह्मस्वरूपेण यः पश्यति, क्षेत्रं च मायानिर्मितहस्तिस्वप्नदृष्टवस्तुगन्धर्वनगरादिवत् ‘असदेव सदिव अवभासते’ इति एवं निश्चितविज्ञानः यः, तस्य यथोक्तसम्यग्दर्शनविरोधात् अपगच्छति मिथ्याज्ञानम् । तस्य जन्महेतोः अपगमात् ‘य एवं वेत्ति पुरुषं प्रकृतिं च गुणैः सह’ (भ. गी. १३ । २३) इत्यनेन ‘विद्वान् भूयः न अभिजायते’ इति यत् उक्तम् , तत् उपपन्नमुक्तम् ॥ २६ ॥ ಭ.ಗೀ.13.26 ಭಾಷ್ಯ. (ಈ ಒಂದು ವಾಕ್ಯದೊಡನೆ ತಿಳಿಯಬೇಕಾದ ಬ್ರಹ್ಮ ಎಂತಹದ್ದು ಎಂಬುದನ್ನು ಹೇಳಿ ಮುಗಿಸಿ ಮುಂದಿನ ಅಂಶಕ್ಕೆ ಸಾಗುವೆವು.) ಕ್ಷೇತ್ರ (ಜಡವಾದ ಅನಾತ್ಮನಾದ ಶರೀರೇಂದ್ರಿಯಗಳನ್ನು) ಚೈತನ್ಯವಾದ ಆತ್ಮನಾದ ಕ್ಷೇತ್ರಜ್ಞನಿಂದ ಬೇರೆಯಾಗಿ ಶಾಸ್ತ್ರ ಬೋಧಿಸಿದ ರೀತಿಯಲ್ಲಿ ತಿಳಿದು, ಶರೀರೇಂದ್ರಿಯಗಳಿಂದ ಆತ್ಮನನ್ನು ಬೇರ್ಪಡಿಸಿ ಅದು ಸರ್ವೋಪಾಧಿವಿಶೇಷ ರಹಿತವಾದ ಜ್ಞೇಯ ಬ್ರಹ್ಮ (ಸಗುಣ ಉಪಾಸ್ಯ ಬ್ರಹ್ಮವಲ್ಲ) ವನ್ನು ತನ್ನ ಸ್ವರೂಪವೇ ಎಂದು ಯಾರು ಕಾಣುವನೋ, ಕ್ಷೇತ್ರವಾದ ಶರೀರೇಂದ್ರಿಯಗಳನ್ನು ಮಾಯಾನಿರ್ಮಿತವಾದ ಆನೆ (ಮಾಯಾಜಾಲದಲ್ಲಿ), ಸ್ವಪ್ನದಲ್ಲಿ ಕಂಡ ವಸ್ತುಗಳು, ಗಂಧರ್ವನಗರ ಮುಂತಾದವುಗಳ ಹಾಗೆ 'ಇಲ್ಲದಿರುವುದೇ ಇರುವ ಹಾಗೆ ತೋರುತ್ತೆ' ಎಂದು ನಿಶ್ಚಯ ಜ್ಞಾನ ಉಳ್ಳವನು, ಅವನಿಗೆ ಈ ಸರಿಯಾದ ಅರಿವು ಮಿಥ್ಯಾಜ್ಞಾನಕ್ಕೆ ವಿರೋಧಿಯಾದ್ದರಿಂದ ಆ ಅಜ್ಞಾನವನ್ನು ನಾಶಮಾಡುತ್ತೆ. ಅವನಿಗೆ ಪುನಃ ಜನ್ಮಕ್ಕೆ ಕಾರಣವಾದ ಅಜ್ಞಾನ ಇಲ್ಲವಾಗಿ 'ಜ್ಞಾನಿಯು ಮತ್ತೆ ಹುಟ್ಟುವುದಿಲ್ಲ' ಎಂದು ಯಾವುದು ಭಗವಂತನಿಂದ ಹೇಳಲಾಗಿತ್ತೋ ಅದು ಎಲ್ಲವೂ ಸಮಂಜಸವಾಗಿಯೇ ಇದೆ.

ಇನ್ನು ಜೀವನ ವಾಸ್ತವವಾದ ಸ್ವರೂಪವನ್ನು ಹೀಗೆ ಹೇಳಿದ್ದಾರೆ: ಬ್ರಹ್ಮಸೂತ್ರ 1.3.19:

यदा तु देहेन्द्रियमनोबुद्धिसङ्घाताद्व्युत्थाप्य श्रुत्या प्रतिबोध्यते नासि त्वं देहेन्द्रियमनोबुद्धिसङ्घातः, नासि संसारी — किं तर्हि ? — तद्यत्सत्यं स आत्मा चैतन्यमात्रस्वरूपस्तत्त्वमसीति ; तदा कूटस्थनित्यदृक्स्वरूपमात्मानं प्रतिबुध्य अस्माच्छरीराद्यभिमानात्समुत्तिष्ठन् स एव कूटस्थनित्यदृक्स्वरूप आत्मा भवति — 'स यो ह वै तत्परमं ब्रह्म वेद ब्रह्मैव भवति' (मु. उ. ३ । २ । ९) इत्यादिश्रुतिभ्यः । तदेव चास्य पारमार्थिकं स्वरूपम् , येन शरीरात्समुत्थाय स्वेन रूपेणाभिनिष्पद्यते । ಯಾವಾಗ ದೇಹೇಂದ್ರಿಯ ಮನಸ್ಸು ಬುದ್ಧಿ ಎಂಬ ಗುಂಪಿನಿಂದ ಎಬ್ಬಿಸಿ ಶ್ರುತಿಯು 'ನೀನು ದೇಹೇಂದ್ರಿಯಾದಿಗಳ ಕೂಟ ಅಲ್ಲ, ನೀನು ಸಂಸಾರಿಯಲ್ಲ. ಮತ್ತೇನು? ಯಾವುದು ಸತ್ಯವೋ ಆತ್ಮವೋ ಚೈತನ್ಯಮಾತ್ರಸ್ವರೂಪವೋ ಅದು ನೀನು (ತತ್ತ್ವಮಸಿ) ಎಂದು, ಆಗ ಜೀವನು ತನ್ನನ್ನು ಕೂಟಸ್ಥವಾದ ನಿತ್ಯ ದೃಕ್ ಸ್ವರೂಪನು ಎಂದು ತಿಳಿದು ಈ ಶರೀರಾದಿ ಅಭಿಮಾನದಿಂದ ಎದ್ದು (ಅಭಿಮಾನವನ್ನು ಬಿಟ್ಟು) ಅದೇ ಕೂಟಸ್ಥ ನಿತ್ಯ ದೃಕ್ ಸ್ವರೂಪ ಆತ್ಮನಾಗಿ ಆಗುತ್ತಾನೆ 'ಯಾವಾತನು ಆ ಪರ ಬ್ರಹ್ಮವನ್ನು ತಿಳಿಯುವನೋ ಅವನು ಬ್ರಹ್ಮವೇ ಆಗುವನು' ಎಂಬ ಮುಂಡಕ ಶ್ರುತಿ ಮುಂತಾದ ಪ್ರಮಾಣಗಳಿಂದ. ಇದೇ ಜೀವನ ಪಾರಮಾರ್ಥಿಕವಾದ ರೂಪವು. ಈ ರೂಪದಿಂದಲೇ ಜೀವನು ಶರೀರದಿಂದ ಎದ್ದು (ಅಭಿಮಾನವನ್ನು ಬಿಟ್ಟು) ತನ್ನ ಸ್ವರೂಪವಾಗಿ ನಿಷ್ಪನ್ನವಾಗುವನು. (ಇಲ್ಲಿ ಛಾಂದೋಗ್ಯ ಮಂತ್ರ 'अथ य एष सम्प्रसादोऽस्माच्छरीरात्समुत्थाय परं ज्योतिरुपसम्पद्य स्वेन रूपेणाभिनिष्पद्यत एष आत्मेति होवाच' (छा. उ. ८ । ३ । ४) ಎಂಬ ಪ್ರಜಾಪತಿ ವಿದ್ಯೆಯ ಪ್ರಮಾಣದಿಂದ ಜೀವನು ತನ್ನ ಚೈತನ್ಯಮಾತ್ರವಾದ ಸ್ವರೂಪವನ್ನು ತಿಳಿಯುತ್ತಾನೆ ಎಂದು ಉಪದೇಶಿಸಿದೆ).

योऽत्र अभिनिष्पद्यत इत्युक्तः, स सर्वबन्धविनिर्मुक्तः शुद्धेनैव आत्मना अवतिष्ठते ಬ್ರಹ್ಮಸೂತ್ರ ಭಾಷ್ಯ 4.4.2 ಯಾರು ಮೇಲಿನ ಶ್ರುತಿಯಲ್ಲಿ ಅಭಿನಿಷ್ಪನ್ನನಾಗುವನು ಎಂದು ಹೇಳಿದೆಯೋ ಅವನು ಸರ್ವಬಂಧವಿನಿರ್ಮುಕ್ತನು ತನ್ನ ಶುದ್ಧ ಸ್ವರೂಪವಾಗಿ ಇದ್ದುಬಿಡುತ್ತಾನೆ.

ಈ ಮೇಲೆ ಕಾಣಿಸಿದ ಅದ್ವೈತ ಪ್ರಸ್ಥಾನತ್ರಯ ಭಾಷ್ಯದ ನಿರ್ಣಯವೇನು?

ಜೀವ ಅಪರೋಕ್ಷ ಜ್ಞಾನವನ್ನು ಪಡೆದು 'ಅಹಂ ಬ್ರಹ್ಮಾಸ್ಮಿ' ಅನುಭವವನ್ನು ಹೊಂದಿದವನು ಯಾವುದೇ ಪ್ರಪಂಚ ಸಂಬಂಧದಿಂದ ತನ್ನನ್ನು ಗುರುತಿಸಿಕೊಳ್ಳುವುದಿಲ್ಲ. ಏಕೆಂದರೆ ಪ್ರಪಂಚ ಪಾರಮಾರ್ಥಿಕ ಸತ್ಯವಲ್ಲ ಎಂದು ತಿಳಿದಿರುವುದರಿಂದ, ಬ್ರಹ್ಮವು ಜೀವ-ಜಗತ್ತು ಎರಡನ್ನೂ ಸತ್ಯವಲ್ಲ ಎಂದು 'ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೇ ಸ ಆತ್ಮಾ ಸ ವಿಜ್ಞೇಯಃ' ಎಂದು ಮಾಂಡೂಕ್ಯದಲ್ಲಿ ತಿಳಿಸಿರುವದರಿಂದ ಕೇವಲ ಚಿನ್ಮಾತ್ರ ಸ್ವರೂಪವಾಗಿರುತ್ತೆ. ಈ ಬ್ರಹ್ಮವನ್ನೇ ಜೀವ ಅಪರೋಕ್ಷ ಜ್ಞಾನದಿಂದ ತನ್ನ ಸ್ವರೂಪವಾಗಿ ತಿಳಿಯುವುದು.

येन ज्ञानेन भूतानि अशेषेण ब्रह्मादीनि स्तम्बपर्यन्तानि द्रक्ष्यसि साक्षात् आत्मनि प्रत्यगात्मनि 'मत्संस्थानि इमानि भूतानि' इति अथो अपि मयि वासुदेवे 'परमेश्वरे च इमानि' इति ; क्षेत्रज्ञेश्वरैकत्वं सर्वोपनिषत्प्रसिद्धं द्रक्ष्यसि इत्यर्थः ॥ ३५ ॥ ಭಗವದ್ಗೀತಾ 14.35 ಭಾಷ್ಯ: ಇಲ್ಲಿ ಅಪರೋಕ್ಷ ಜ್ಞಾನದ ಪ್ರಕಾರವನ್ನು ತಿಳಿಸಿದ್ದಾರೆ: ತನ್ನ ಆತ್ಮನಲ್ಲಿ ಪ್ರತ್ಯಗಾತ್ಮನಲ್ಲಿ (ಪಂಚ ಕೋಶಗಳಿಂದ

ಬೇರೆಯಾದ ಕೇವಲ ಚೈತನ್ಯದಲ್ಲಿ) 'ಈ ಪ್ರಪಂಚವು ನನ್ನಲ್ಲಿದೆ' ಎಂದೂ ವಾಸುದೇವನಾದ ಪರಮೇಶ್ವರನಲ್ಲೂ ಇವು ಇದೆ' ಎಂದು ಕ್ಷೇತ್ರಜ್ಞ (ಜೀವಾತ್ಮಾ) ಮತ್ತು ಈಶ್ವರ ಪರಮಾತ್ಮರ ಏಕತ್ವವನ್ನು, ಸರ್ವೋಪನಿಷತ್ತುಗಳಲ್ಲೂ ಪ್ರಸಿದ್ಧವಾದದ್ದನ್ನು ತಿಳಿಯುವೆ.

ननु अहमीश्वर एवोक्तः श्रुत्या — यद्येवं प्रतिबुद्धोऽसि, नास्ति कस्यचिदप्रबोधः । ಬ್ರಹ್ಮ ಸೂತ್ರ ಭಾಷ್ಯ 4.1.3. ಇಲ್ಲಿ ಪೂರ್ವವಾದಿ ಹೇಳುತ್ತಾನೆ 'ನನ್ನನು ಈಶ್ವರನೆಂದೇ ಶ್ರುತಿಯು ಹೇಳುತ್ತಲ್ಲ?' ಇದಕ್ಕೆ ಉತ್ತರ ಸಿದ್ಧಾಂತೀ ಕೊಡುವುದು: ಹೀಗೆ ನಿನಗೆ ಜ್ಞಾನವಿದ್ದರೆ ಆಗ ಅಜ್ಞಾನವು ಯಾರಿಗೂ ಇಲ್ಲ'. ಇಲ್ಲಿ ಯದ್ಯಪಿ ಈಶ್ವರಶಬ್ದ ಪ್ರಯುಕ್ತವಾಗಿದ್ದರೂ, ಭಾಷ್ಯದಲ್ಲಿ ಅನೇಕ ಕಡೆ 'ಈಶ್ವರ, ಪರಮೇಶ್ವರ' ಶಬ್ದಗಳು ನಿರ್ಗುಣ ಬ್ರಹ್ಮವನ್ನು ಸೂಚಿಸುತ್ತವೆ. ಉದಾಹರಣೆ: ಈಶಾವಾಸ್ಯ ಉಪನಿಷತ್ತಿನ ಪ್ರಥಮ ಮಂತ್ರ ಭಾಷ್ಯ: ईशिता परमेश्वरः परमात्मा सर्वस्य । स हि सर्वमीष्टे सर्वजन्तूनामात्मा सन् प्रत्यगात्मतया । तेन स्वेन रूपेणात्मना ईशा वास्यम् आच्छादनीयम् । किम्? इदं सर्वं यत्किं च यत्किञ्चित् जगत्यां पृथिव्यां जगत् तत्सर्वम् । स्वेनात्मना ईशेन प्रत्यगात्मतया अहमेवेदं सर्वमिति परमार्थसत्यरूपेणानृतमिदं सर्वं चराचरमाच्छादनीयं परमात्मना । यथा चन्दनागर्वादेरुदकादिसम्बन्धजक्लेदादिजमौपाधिकं दौर्गन्ध्यं तत्स्वरूपनिघर्षणेनाच्छाद्यते स्वेन पारमार्थिकेन गन्धेन, तद्वदेव हि स्वात्मन्यध्यस्तं स्वाभाविकं कर्तृत्वभोक्तृत्वादिलक्षणं जगद्द्वैतरूपं पृथिव्याम् ....

[ಪರಮೇಶ್ವರನಾದ ಪರಮಾತ್ಮನು ಎಲ್ಲರ ನಿಯಾಮಕ. ಅವನು ಎಲ್ಲರ ಪ್ರತ್ಯಗಾತ್ಮವಾಗಿಯೇ ಇದ್ದುಕೊಂಡು ನಿಯಮಿಸುತ್ತಾನೆ.] ಹೀಗೆ ಈಶ್ವರ/ಪರಮೇಶ್ವರ ಜೀವನ ಆತ್ಮವೇ, .. ಜೀವನು (ಸಾಧಕನು) ತನ್ನ ಸ್ವರೂಪಭೂತವಾದ ಈಶ್ವರನಿಂದ 'ಇದೆಲ್ಲವೂ ನಾನೇ, ಪರಮಾರ್ಥ ಸತ್ಯ ರೂಪದಿಂದ ಈ ಚರಾಚರ ಜಗತ್ತು ಸತ್ಯವಲ್ಲ. ಈ ಈಶ್ವರ (ಚೈತನ್ಯಾತ್ಮ)ನಿಂದ ಈ ಇಡೀ ಪ್ರಪಂಚವೂ ಆಚ್ಛಾದಿಸಲ್ಪಡಬೇಕು. ಹೇಗೆ ಗಂಧದ ಚೆಕ್ಕೆ ಬಹು ಕಾಲ ತ್ಯಾವದಿಂದ ದುರ್ಗಂಧವಾಗಿರುತ್ತೋ, ಅದನ್ನು ಶುದ್ಧಮಾಡಿ ತೇಯಲು ತನ್ನ ಸ್ವರೂಪಭೂತ ಸುಗಂಧದಿಂದ ಆಚ್ಛಾದಿತವಾಗುವುದೋ ಹಾಗೆ...]

ಭ.ಗೀ.16ನೆ ಅಧ್ಯಾಯದ 'ಈಶ್ವರೋಽಹಂ ಅಹಂ ಭೋಗೀ ..' ಎಂಬ ಶ್ಲೋಕಕ್ಕೆ ಶ್ರೀ ರಾಘವೇಂದ್ರ ತೀರ್ಥರು ತಮ್ಮ ಗೀತಾ ವಿವೃತಿಯಲ್ಲಿ ಹೀಗೆ ಹೇಳಿದ್ದಾರೆ:

अहमीश्वरः परमेश्वरः, भोगी ऐहिकामुष्मिकभोगसम्पन्नः, सिद्धः कृतकृत्यः, बलवान् समर्थः - ಸುಲಭವಾಗಿಯೆ ಇದೆ. ಇವರೇ ಇದೇ ಅಧ್ಯಾಯದ 'ಅಸತ್ಯಮಪ್ರತಿಷ್ಠಂ ತೇ...' ಎಂಬ ಶ್ಲೋಕಕ್ಕೆ ಎರಡು ಅರ್ಥ ಮಾಡಿ 'यद्वा जगदसत्यम्, सत्यम् न, मिथ्या इत्यर्थः | अत एव शुक्तिरूप्यवन्न प्रतिष्ठम् अप्रतिष्ठम्, ज्ञानबाध्यम् | अनीश्वरं नियन्तृहीनम् | ಎಂದಿದ್ದಾರೆ. ಇದರ ಪ್ರಕಾರ ಯಾರು ಜಗತ್ತನ್ನು ಮಿಥ್ಯೆಯಂದು ತಿಳಿಯುವರೋ, ಅದಕ್ಕೆ ಪ್ರತಿಷ್ಠೆ, ನಿಯಾಮಕನೇ ಇಲ್ಲ ಎಂದು ತಿಳಿಯುವರೋ ಅವರು ತನ್ನನ್ನು ಪರಮೇಶ್ವರ ಎಂದು ತಿಳಿಯುತ್ತಾರೆ ಎಂದಾಯಿತು. ಇದು ವಿರೋಧ. ಜಗತ್ತೇ ಇಲ್ಲ, ನಿಯಾಮಕನಿಲ್ಲ ಎಂದು ತಿಳಿದವನು ಹೇಗೆ ತನ್ನನ್ನು ಪರಮೇಶ್ವರ ಎಂದು ತಿಳಿದಾನು? ಪರಮೇಶ್ವರ ಇಡೀ ಜಗತ್ತಿಗೆ ನಿಯಾಮಕನಲ್ಲವೆ? ಇಲ್ಲದ ಜಗತ್ತಿಗೆ ತನ್ನನ್ನು ಪರಮೇಶ್ವರನೆಂದು ಯಾರಾದರೂ ತಿಳಿಯುವರಾ? ಶಂಕರರ ಮತದಲ್ಲಿ ಜಗತ್ತಿಗೆ ಯದ್ಯಪಿ ಪಾರಮಾರ್ಥಿಕ ಸತ್ಯತ್ವ ಇಲ್ಲವೆಂದರೂ, ಮೋಕ್ಷ ಪರ್ಯಂತ ಜಗತ್ತು,

ನಿಯಾಮಕನು, ಎಲ್ಲವೂ ಸತ್ಯವೇ. ಈ ದೃಷ್ಟಿಯನ್ನು ಶಂಕರರು ಅಲ್ಲೇ ವ್ಯತಿರೇಕಮುಖೇನ ಹೇಳಿದ್ದಾರೆ: असत्यं यथा वयम् अनृतप्रायाः तथा इदं जगत् सर्वम् असत्यम् , अप्रतिष्ठं च न अस्य धर्माधर्मौ प्रतिष्ठा अतः अप्रतिष्ठं च, इति ते आसुराः जनाः जगत् आहुः, अनीश्वरम् न च धर्माधर्मसव्यपेक्षकः अस्य शासिता ईश्वरः विद्यते इति अतः अनीश्वरं जगत् आहुः ।

ಹೇಗೆ ನಾವುಗಳು (ಹಿಂದಿನ ಶ್ಲೋಕದಿಂದ ಅನುವೃತ್ತಿ -

प्रवृत्तिं च निवृत्तिं च जना न विदुरासुराः । न शौचं नापि चाचारो न सत्यं तेषु विद्यते ॥ ७ ॥ ಆಸುರರು ಸತ್ಯಕ್ಕೆ ಮೌಲ್ಯ ಕೊಡುವುದಿಲ್ಲ) ಅನೃತಪ್ರಾಯರೋ ಹಾಗೆಯೇ ಈ ಜಗತ್ತು ಅಸತ್ಯ. ಇದಕ್ಕೆ ಧರ್ಮಾಧರ್ಮಗಳು ಪ್ರತಿಷ್ಠೆ, ಆಧಾರವಾಗಿಲ್ಲ. ಅನೀಶ್ವರಂ = ಧರ್ಮಾಧರ್ಮಗಳಿಕೆ ಅಪೇಕ್ಷಿತನಾದ ಶಾಸನ ಮಾಡುವ (ನಿಯಾಮಕ) ಈಶ್ವರ ಇಲ್ಲ.

ಹೀಗೆ ಶಂಕರರು ತಮ್ಮ ಮತದಲ್ಲಿ ಜಗತ್ತಿಗೆ ಧರ್ಮಾಧರ್ಮಗಳು ಪ್ರತಿಷ್ಠೆ, ಈಶ್ವರ ನಿಯಾಮಕ ಎಂದು ತಿಳಿಸಿದ್ದಾರೆ. ಆದರೆ ಶ್ರೀ ರಾಘವೇಂದ್ರರು ಜಗನ್ಮಿಥ್ಯಾವಾದಿಗಳು ನಿಯಾಮಕನಿಲ್ಲ ಎನ್ನುವವರು ತಮ್ಮನ್ನು ಪರಮೇಶ್ವರ ಎಂದು ತಿಳಿಯುವರು ಎಂದಿದ್ದಾರೆ. ಇದು ತಾ.ನಿ.ಯದ ಶ್ಲೋಕಕ್ಕೆ ಅನ್ವಯಿಸುತ್ತೆ: 'ಈ ಲೋಕವು ಅಸತ್ಯ, ಪ್ರತಿಷ್ಠೆ ಇಲ್ಲದ್ದು, ಕರ್ತೃ ನಿಯಾಮಕನಾದ ಈಶ್ವರನಿಲ್ಲದ್ದು, ನಾನು ಸಿದ್ಧನು, ನಾನು ಈಶ್ವರನು'. ಅದ್ವೈತ ಭಾಷ್ಯದಲ್ಲಿ ಮೇಲೆ ತೋರಿಸಿದ ಪ್ರಕಾರ ಜೀವ ಜ್ಞಾನಿಯಾದಾಗ ತನ್ನನ್ನು 'ಈಶ್ವರ/ಪರಮೇಶ್ವರ' ಎಂದು ತಿಳಿಯುವುದಿಲ್ಲ. 'ಸಕಲ ಪ್ರಪಂಚೋಪಾಧಿ ವರ್ಜಿತವಾದ ಬ್ರಹ್ಮವನ್ನು, ಸಕಲ ಶರೀರೇಂದ್ರಿಯ ಕರ್ತೃ ಭೋಕ್ತೃ ಉಪಾಧಿರಹಿತನಾಗಿ 'ಅಹಂ ಬ್ರಹ್ಮಾಸ್ಮಿ' ಎಂದು ತಿಳಿಯುತ್ತಾನೆ. ಹಾಗಾಗಿ 'ಈಶೋಽಹಂ, ಸಿದ್ಧೋಽಹಂ' ಎಂಬ ಅನುಸಂಧಾನ ಜಗತ್ತು ಅಸತ್ಯ ಅಪ್ರತಿಷ್ಠಿತ, ಅನೀಶ್ವರ ಎಂಬ ಅನುಸಂಧಾನಕ್ಕೆ ವಿರುದ್ಧವಾದದ್ದು.

ಇನ್ನು ಗೀತೆಯ ಅಲ್ಲಿಯ ಶ್ಲೋಕದ 'ಉಗ್ರಕರ್ಮಾಣಃ' ಎಂಬುದನ್ನೂ ಮಧ್ವರು ತತ್ತ್ವೋದ್ಯೋತದಲ್ಲಿ ಉದ್ಧರಿಸಿದ್ದಾರೆ. ಅದಕ್ಕೆ ಸಂವಾದಿಯಾಗಿಯೇ ತಾ.ನಿ.ದ ಪ್ರಸಂಗವೂ. ಈ ಸಂದರ್ಭದಲ್ಲಿ ಶಂಕರರ ಒಂದು ಮಾತನ್ನು ನೆನಪಿಸಬೇಕು:

पूर्वानुभूतविषया प्रज्ञा पूर्वप्रज्ञा अतीतकर्मफलानुभववासनेत्यर्थः ; सा च वासना अपूर्वकर्मारम्भे कर्मविपाके च अङ्गं भवति ; तेन असावपि अन्वारभते ; न हि तया वासनया विना कर्म कर्तुं फलं च उपभोक्तुं शक्यते ; न हि अनभ्यस्ते विषये कौशलम् इन्द्रियाणां भवति ; पूर्वानुभववासनाप्रवृत्तानां तु इन्द्रियाणाम् इह अभ्यासमन्तरेण कौशलमुपपद्यते ; दृश्यते च केषाञ्चित् कासुचित्क्रियासु चित्रकर्मादिलक्षणासु विनैव इह अभ्यासेन जन्मत एव कौशलम् , कासुचित् अत्यन्तसौकर्ययुक्तास्वपि अकौशलं केषाञ्चित् ; तथा विषयोपभोगेषु स्वभावत एव केषाञ्चित् कौशलाकौशले दृश्येते ; तच्च एतत्सर्वं पूर्वप्रज्ञोद्भवानुद्भवनिमित्तम् ; तेन पूर्वप्रज्ञया विना कर्मणि वा फलोपभोगे वा न कस्यचित् प्रवृत्तिरुपपद्यते । तस्मात् एतत् त्रयं शाकटिकसम्भारस्थानीयं परलोकपथ्यदनं विद्याकर्मपूर्वप्रज्ञाख्यम् । यस्मात् विद्याकर्मणी पूर्वप्रज्ञा च देहान्तरप्रतिपत्त्युपभोगसाधनम् , तस्मात् विद्याकर्मादि शुभमेव समाचरेत् , यथा इष्टदेहसंयोगोपभोगौ स्याताम् — इति प्रकरणार्थः ॥_ಬೃಹದಾರಣ್ಯಕ ಭಾಷ್ಯ 4.4.2

ಇದರ ಸಾರ: ಒಬ್ಬ ಯಾವುದೇ ಕರ್ಮ, ಮನೋವಾಕ್ಕಾಯಗಳಿಂದ, ಮಾಡಲಿ, ಅದು ಒಂದು ಸಂಸ್ಕಾರವನ್ನು ಉಂಟುಮಾಡುತ್ತೆ. ಮತ್ತೊಮ್ಮೆ ತತ್ಸಂಬಂಧಿ ಸಂದರ್ಭ ಉಂಟಾದಾಗ ಆ ಹಿಂದಿನ ವಾಸನೆ ಅವನನ್ನು ಅದರಲ್ಲಿ ಪ್ರವರ್ತಿಸುತ್ತೆ. ಹೀಗೆ ವಾಸನೆ ಎಂಬುದು ಒಬ್ಬನ ಜನ್ಮವನ್ನು ನಿರ್ಣಯಿಸುತ್ತೆ. ಹಾಗಾಗಿ ಪಡೆಯುವ ಜ್ಞಾನವೋ ಮಾಡುವ ಕರ್ಮವೋ ಶುಭವಾಗಿಯೇ, ಒಳ್ಳೆಯದಾಗಿಯೆ, ಅಶುಭವಲ್ಲದೆ, ಇರಬೇಕು.

ಇವರು ಹೇಗೆ ಉಗ್ರ ಕರ್ಮದವರಾಗುವರು?

ಈ ಆಸುರ ಧರ್ಮಗಳು ಒಂದೇ ಧರ್ಮಿಗೆ ಇರಬೇಕೆಂದು ಭಾವಿಸುವುದು ಬೇಡ, ಬೇರೆ ಬೇರೆ ಧರ್ಮಿಗಳಿಗೆ ಆಗಬಹುದಲ್ಲ ಎಂಬ ಪ್ರಶ್ನೆ ಮಾಡ ಬಹುದು. ಆದರೆ ಮಧ್ವರು ತಮ್ಮ ತತ್ತ್ವೋದ್ಯೋತದಲ್ಲಿ ಪ್ರಾರಂಭದಲ್ಲೇ ಅದ್ವೈತವನ್ನು ವಿಮರ್ಶಿಸುವಾಗ ಗೀತೆಯ ಈ 16ನೆ ಅಧ್ಯಾಯದ 8,9

(असत्यमप्रतिष्ठं ते जगदाहुरनीश्वरम् । अपरस्परसम्भूतं किमन्यत्कामहैतुकम् ॥८॥
एतां दृष्टिमवष्टभ्य नष्टात्मानोऽल्पबुद्धयः । प्रभवन्त्युग्रकर्माणः क्षयाय जगतोऽहिताः॥९||

ಶ್ಲೋಕಗಳನ್ನು ಉದ್ಧರಿಸಿ 'ಇತ್ಯಾದಿ ಚ ಗೀತಾಸು' ಎಂದು ನಿಃಸಂಶಯವಾಗಿ 'ಈಶ್ವರೋಹಂ...' ಮುಂತಾದ ಶ್ಲೋಕಗಳನ್ನೂ ಅದ್ವೈತಕ್ಕೆ ಹೇಳಿದ್ದಾರೆ. ಹಾಗಾಗಿ ಸೌಗಂಧಿಕ ವನದಲ್ಲಿ ಇದ್ದವರು ಈ ಧರ್ಮಗಳನ್ನು ಹೊಂದಿದ್ದರು ಎಂಬುದು ಮಧ್ವರ ಅಭಿಪ್ರಾಯ. ಇದು ಹೇಗೆ ಅದ್ವೈತ ಶಾಸ್ತ್ರಕ್ಕೆ ವಿರೋಧ, ಎಂದರೆ, ಈ ಧರ್ಮಗಳು ಅದ್ವೈತದಲ್ಲಿ ಲಕ್ಷಣಸಮನ್ವಯ ಹೊಂದುವುದಿಲ್ಲ ಎಂಬುದನ್ನು ಈಗಾಗಲೇ ಸ್ಪಷ್ಟವಾಗಿ ನೋಡಿ ಆಗಿದೆ. ಅದ್ವೈತದಲ್ಲಿ ಯಾವ ಸ್ತರದಲ್ಲಿ ಜಗತ್ತು ಪ್ರತಿಷ್ಠೆ, ಈಶ್ವರ ನಿಯಾಮಕತ್ವ ಎಲ್ಲವನ್ನೂ ಒಪ್ಪಿದ್ದಾರೆ ಎಂಬುದನ್ನು ಕಾಣಿಸಿದೆ.

ತಾ.ನಿ.ದ ಶ್ಲೋಕದಲ್ಲಿ ಭೀಮ ಅವರುಗಳನ್ನು ಏನು ಹೇಳಿ ವಾದಿಸಿ/ಕೊಂದ ಎಂಬುದನ್ನು 'गुणान् विष्णोः ख्यापयन् वादतोऽजैत् । २२.२८४ । [22.301]

भिन्नं विष्णुमधिकं सर्वतश्च ब्रुवन् प्रवीरान् लक्षमेषां निजघ्ने । (ಭೀಮನು ವಿಷ್ಣುವಿನ ಗುಣಗಳನ್ನು ಸಾರುತ್ತ ವಾದದಿಂದ ಜೆಯಿಸಿ, ವಿಷ್ಣುವು ಜೀವರಿಗಿಂತ ಭಿನ್ನನು, ಎಲ್ಲಕ್ಕಿಂದ ಅಧಿಕನು ಎಂದು ಹೇಳುತ್ತ ಆ ಲಕ್ಷಾಂತರ ಜನರನ್ನು ಕೊಂದನು.) ಎಂದು ಹೇಳಿದ್ದಾರೆ. ಇಲ್ಲಿ ಭೀಮ ಹೇಳಿದ ಪ್ರಮೇಯಾಂಶಗಳು: ಪರಮಾತ್ಮನ (ವಿಷ್ಣುವಿನ) ಗುಣಪೂರ್ಣತ್ವ, ಜೀವೇಶ್ವರ ಭೇದ, ಸಕಲ ಜಗತ್ತು ಜೀವಗಳಿಗೂ ಪರಮಾತ್ಮನು ಅಧಿಕ, ಉತ್ಕೃಷ್ಟ ಎಂಬುದು. ಈ ಪ್ರಮೇಯಗಳು ಮಧ್ವ ಮತದಕ್ಕೆ ಮಾತ್ರ ಸೀಮಿತವಲ್ಲ. ನ್ಯಾಯ, ವೈಶೇಷಿಕ, ಪಾತಂಜಲ ಯೋಗ, ಶೈವ, ಪಾಂಚರಾತ್ರ, ಶಂಕರೋತ್ತರ ಭಾಸ್ಕರ (ಬಹುತೇಕ), ಯಾದವ ಪ್ರಕಾಶ, ಬೋಧಾಯನ, ರಾಮಾನುಜರ ಮತಗಳಲ್ಲೂ ಇರುವುದು. ಹಾಗಾಗಿ ಭೀಮನು ಮಧ್ವರ / ಮಧ್ವಮತದ ಪ್ರತಿನಿಧಿಯಾಗಿದ್ದು ಹೀಗೆ ವಾದಿಸಿ ಕೊಂದನು ಎಂದು ಹೇಳಲು ಬರುವುದಿಲ್ಲ. ಆದ್ದರಿಂದ ಭೀಮ - ಸೌಗಂಧಿಕವನ ಪ್ರಸಂಗ - ಅಲ್ಲಿ ಅವನಿಂದ ಮೃತರಾದವರು (ಅವರುಗಳು ಮತ್ತೆ ಕಲಿಯಲ್ಲಿ ಭೂರಿವೈರಿಗಳಾಗಿ ಜನಿಸಿದ್ದು ಎಂಬ ಕಥೆ) ಇವುಗಳ ಸಂಬಂಧವನ್ನು ಮಧ್ವರಿಗೆ ಮಾತ್ರ ಕಲ್ಪಿಸಲು ಬರುವುದಿಲ್ಲ. ಇನ್ನು ಆ ಅಸುರರು ಹೊಂದಿದ್ದ ಭಾವನೆಗಳು ಅದ್ವೈತದ ಪ್ರಮೇಯಗಳೇ ಅಲ್ಲ ಎಂಬುದು ಅದ್ವೈತಶಾಸ್ತ್ರದ ಸರಿಯಾದ (ಆಪಾತತವಾಗಿ ಅಲ್ಲದೆ) ಪರ್ಯಾಲೋಚನೆಯಿಂದ ಸ್ಥಿರವಾದ್ದರಿಂದ ತತ್ತ್ವೋದ್ಯೋತ, ತಾ.ನಿ. ಮುಂತಾದವುಗಳಲ್ಲಿ ಗೀತೆಯ ಆಸುರಾಧ್ಯಾಯದ ಸಂಬಂಧವನ್ನು ಅದ್ವೈತಕ್ಕೆ ಕಲ್ಪಿಸಿದ್ದು ಅದ್ವೈತ ಶಾಸ್ತ್ರದ ಪ್ರಾಜ್ಞರಿಗೆ ಕೂಡಲೆ ತಪ್ಪು ಎಂದು ವೇದ್ಯವಾಗುತ್ತೆ. ಶಾಸ್ತ್ರ ಪರಿಜ್ಞಾನ ರಹಿತರು ಮಾತ್ರ ಈ ಸಂಬಂಧಕಲ್ಪನೆಯನ್ನು ಅನುಮೋದಿಸುವರು.

'ಅಸತ್ಯಂ' ಎಂದು ಜಗತ್ತನ್ನು ಹೇಳುವ ಆ ಅಸುರರು ಆ ಜಗತ್ತಿಗೆ ಬ್ರಹ್ಮವನ್ನು ಅಧಿಷ್ಠಾನವಾಗಿ ಹೇಳಿದರೆ? ಅದ್ವೈತದಲ್ಲಿ ಮಿಥ್ಯಾಭೂತವಾದ ಜಗತ್ತಿಗೆ ಬ್ರಹ್ಮವನ್ನು ಅಧಿಷ್ಠಾನವಾಗಿ ಹೇಳಿದೆ:

तेजसोऽपि विनाशोत्पत्तिमत्त्वात् शुङ्गत्वमिति तेजसा सोम्य शुङ्गेन सन्मूलम् एकमेवाद्वितीयं परमार्थसत्यम् । यस्मिन्सर्वमिदं वाचारम्भणं विकारो नामधेयमनृतं रज्ज्वामिव सर्पादिविकल्पजातमध्यस्तमविद्यया, तदस्य जगतो मूलम् ; ಛಾಂದೋಗ್ಯ 6.8.4. ಭಾಷ್ಯ.
ಇಲ್ಲಿ ಭೂತಸೃಷ್ಟಿ ಸದ್ಬ್ರಹ್ಮದಿಂದ ಹೇಳಿದೆ. ಅದೇ ಉಪನಿಷತ್ತಿನ 'ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ' ಎಂಬ ಉಪದೇಶದಂತೆ ಸದ್ಬ್ರಹ್ಮದ ಕಾರ್ಯವಾದ ತೇಜ ಆದಿ ಭೂತಗಳು ಮತ್ತು ಭೌತಿಕ ಪ್ರಪಂಚವು ತನ್ನ ಮೂಲಕಾರಣವಾದ ಬ್ರಹ್ಮದಲ್ಲಿ ಅಧ್ಯಸ್ತವಾದವು, ಆ ಬ್ರಹ್ಮವೇ ಈ ಜಗತ್ತಿಗೆ ಮೂಲ, ಅಧಿಷ್ಠಾನ. ಹಾಗಾಗಿ ಕಾರ್ಯವಾದ ಜಗತ್ತು ಕಾರಣ ಬ್ರಹ್ಮಾನನ್ಯವಾದರೂ ಆ ಜಗತ್ತಿಗೆ ಮೂಲವಾಗಿ ಬ್ರಹ್ಮವನ್ನು ಒಪ್ಪಿದೆ ಅದ್ವೈತ. ಹೀಗೆ ಜಗತ್ತನ್ನು ಅಸತ್ಯವೆಂದ ಆ ಸೌಗಂಧಿಕವನದ ಅಸುರರು ಬ್ರಹ್ಮಮೂಲ ಎಂದು ಒಪ್ಪಿದರೆ?

किं तर्हि ? नामरूपाद्यनात्माध्यारोपणनिवृत्तिरेव कार्या, आत्मचैतन्यविज्ञानं कार्यम् , अविद्याध्यारोपितसर्वपदार्थाकारैः अविशिष्टतया दृश्यमानत्वात् इति । ... तस्मात् अविद्याध्यारोपितनिराकरणमात्रं ब्रह्मणि कर्तव्यम् , ಭ.ಗೀ.ಭಾ.18.50.

[ ಸಕಲ ಭೇದಾತ್ಮಕ ಪ್ರಪಂಚವೂ ಬ್ರಹ್ಮದಲ್ಲಿ ಆರೋಪಿತ ಎಂಬುದು ಇದರ ಅಭಿಪ್ರಾಯ. ]

ಭ.ಗೀತೆಯಲ್ಲಿ 'ಅಸತ್ಯಮಪ್ರತಿಷ್ಠಂ..' ಎಂಬ ಶ್ಲೋಕದಲ್ಲಿ ಒಂದು ವೇಳೆ ಅದ್ವೈತಿಗಳೇ ಭಗವದಭಿಪ್ರೇತರಾದಿದ್ದರೆ ಜಗತ್ತಿಗೆ ಅನೇಕ (ಐದು) ವಿಶೇಷಣಗಳು ಹೇಳುವಾಗ 'ಅವರು - ಅಸುರರು - ಬ್ರಹ್ಮವನ್ನು ಅಧಿಷ್ಠಾನವಾಗಿ ಹೇಳುತ್ತಾರೆ' ಎಂದು ಹೇಳ ಬೇಕಾಗಿತ್ತು, 'ಅಪ್ರತಿಷ್ಠಂ' ಎಂದು ಹೇಳಿದ್ದರಿಂದ. ಆದರೆ ಈ ಮೂಲಭೂತವಾದ ಪ್ರಮೇಯವನ್ನು ಕೊಡದ ಕಾರಣದಿಂದಲೂ ಈ ಶ್ಲೋಕಗಳು ಅದ್ವೈತಿಯನ್ನು ಕುರಿತಾದದ್ದಲ್ಲ ಎಂಬುದು ಸಿದ್ಧವಾಗುತ್ತೆ.

'ಈಶೋಽಹಂ' ಎಂದು ಮಧ್ವಾಭಿಪ್ರಾಯದ ಗುಣಪೂರ್ಣ ಈಶ್ವರನನ್ನು ಇಲ್ಲಿ ಗ್ರಹಿಸುವುದು ಸರಿಯಲ್ಲ. ಅದ್ವೈತದಲ್ಲಿ ಆ ಈಶ್ವರನನ್ನು (ಸಗುಣ ಬ್ರಹ್ಮ) ಉಪಾಸ್ಯನಾಗಿಯೇ ಹೇಳಿದೆ ಹೊರತು 'ನಾನೇ ಅದು' ಎಂದು ಐಕ್ಯವನ್ನಲ್ಲ. 'ಬ್ರಹ್ಮಾಹಂ' ಎಂಬ ಜ್ಞಾನವು ಜ್ಞೇಯವಾದ ನಿರ್ಗುಣ ಬ್ರಹ್ಮಕ್ಕೆ ಮಾತ್ರ ಒಪ್ಪಿದೆ ಅದ್ವೈತದಲ್ಲಿ. ಇದರ ಸಂವಾದಿ ವಾಕ್ಯವನ್ನು ಹಿಂದೆ ಗೀತಾ ಭಾಷ್ಯದಿಂದ ಉದಾಹರಿಸಿದೆ. ಮತ್ತು ಯಾರು ತನ್ನನ್ನು ಬ್ರಹ್ಮಾಹಂ ಎಂದು ತಿಳಿಯುವನೋ ಅವನು 'ಸಿದ್ಧೋಽಹಂ ಬಲವಾನ್ ಸುಖೀ' ಮುಂತಾದ ರೀತಿಯಲ್ಲಿ ತಿಳಿಯುವುದಿಲ್ಲ. ಈ ಎಲ್ಲ ವಿಶೇಷಣಗಳೂ ಅನಾತ್ಮನಾದ ಶರೀರೇಂದ್ರಿಯಗಳಿಗೆ ಸೇರಿದ್ದು ಎಂಬ ಕಾರಣ.

ಇನ್ನು ಅಲ್ಪಜ್ಞತ್ವಾದಿವಿಶಿಷ್ಟ ಜೀವನನ್ನು ಗುಣಪೂರ್ಣನಾದ ಈಶ್ವರನೊಡನೆ ಐಕ್ಯ ಹೇಳ ಬಾರದೆಂದೇ ಅದ್ವೈತದಲ್ಲಿ ಲಕ್ಷಣಾ (ಜಹದಜಹಲ್ಲಕ್ಷಣಾ ಅಥವಾ ಭಾಗತ್ಯಾಗ ಲಕ್ಷಣಾ) ಆಶ್ರಿತವಾಗಿದೆ. 'ನಿರಸ್ತ ಸರ್ವೋಪಾಧಿ...' ಎಂಬ ಅನೇಕ

ಭಾಷ್ಯವಾಕ್ಯಗಳನ್ನು ಮೇಲೆ ತೋರಿಸಿದೆ. ಹಾಗಾಗಿ 'ಈಶ್ವರೋಽಹಂ' ಎಂಬುದು ಅದ್ವೈತದ ಪ್ರಮೇಯಕ್ಕೆ ವಿರುದ್ಧವಾದದ್ದು.

ಸೌಗಂಧಿಕ ವನ ಪ್ರಸಂಗ ಬರುವ ಮಹಾಭಾರತದಲ್ಲಿ (ವನ / ಆರಣ್ಯಕ ಪರ್ವ) ಯುದ್ಧದ ಸುದೀರ್ಘ ವರ್ಣನೆ ಇದೆ. ಆದರೆ ಅಲ್ಲಿಯ ಲಕ್ಷಾಂತರ ಜನರು 'ಈಶೋಽಹಂ, ಅಸತ್ಯಂ ಜಗತ್..' ಎಂಬ ಭಾವನೆಯುಳ್ಳವರು ಎಂಬುದಕ್ಕೆ ಮ.ಭಾ.ದಲ್ಲಿ ಉಲ್ಲೇಖ ಸಿಗಲಿಲ್ಲ. ಇನ್ನು ಯಾವುದಾದರು ನಮಗೆ ಸಿಗದ ಸಂಸ್ಕರಣದಲ್ಲಿ ಉಲ್ಲೇಖವಿದ್ದರೂ ಅದ್ವೈತಿಗಳಿಗೆ ಅದರಿಂದ ಚಿಂತೆಯಿಲ್ಲ (ಮಧ್ವರು ತಾ.ನಿ.ದಲ್ಲಿ ಆ ಭಾವನೆಗಳನ್ನು ಅನುವಾದ ಮಾಡಿದ್ದಾರೆ) ಏಕೆಂದರೆ ಆ ಭಾವನೆಗಳು ಅದ್ವೈತ ಮತದ ಪ್ರಮೇಯಗಳಲ್ಲ. ಇನ್ನು ಈಶ್ವರೋಽಹಂ ಎಂದು ಅವರುಗಳು ಭಾವಿಸಿದ್ದರೆ ತಮ್ಮನ್ನು ಕುಬೇರನ ಭೃತ್ಯರು ಎಂದು ಹೇಳುತ್ತಿರಲಿಲ್ಲ. ಕುಬೇರನನ್ನು ಒಡೆಯನಾಗಿ / ಸ್ವಾಮಿಯಾಗಿ ತಿಳಿಯುತ್ತಿರಲಿಲ್ಲ. ಇಡೀ ಜಗತ್ತಿಗೆ ಈಶ್ವರರಾದರೆ ಅವರು ಸೌಗಂಧಿಕ ವನಕ್ಕೂ ಈಶ್ವರರೇ ಆಗುವರು. ಅದು ಕುಬೇರನಿಗೆ ಸೇರಿದ್ದು ಎನ್ನುತ್ತಿರಲಿಲ್ಲ. ಮತ್ತು ಲಕ್ಷಾಂತರ ಜನ ತಮ್ಮನ್ನು ಈಶ್ವರೋಽಹಂ ಎಂದು ಭಾವಿಸಲು ಸಾಧ್ಯವಿಲ್ಲ ಏಕಕಾಲದಲ್ಲಿ. ಅನೇಕೇಶ್ವರ ಪ್ರಸಂಗ ಯುಕ್ತವಾಗದು. ಪರಸ್ಪರ ಈಶ್ವರತ್ವ/ನಿಯಾಮಕತ್ವ ಒಪ್ಪಲಾರದೆ ಸಹಿಸಲಾರದೆ ತಮ್ಮನ್ನು ತಾವೇ ಕೊಂದುಕೊಳ್ಳುತ್ತಿದ್ದರು. ಭೀಮನಿಗೆ ಅಲ್ಲಿ ಯಾವ ಪಾತ್ರವೂ ಇರುತ್ತಿರಲಿಲ್ಲ. (ಈ ಆಸುರ ಧರ್ಮಗಳು ಒಂದೇ ಧರ್ಮಿಯಲ್ಲಿ ಕಲ್ಪಿಸುವುದು ಬೇಡ, ಬೇರೆ ಬೇರೆಯವರಲ್ಲಿ ಇರಬಹುದಲ್ಲ ಎಂಬ ಪ್ರಶ್ನೆಯನ್ನು ಈ ಹಿಂದೆಯೇ ತತ್ತ್ವೋದ್ಯೋತದ ಮತ್ತು ತಾ.ನಿ.ಯಗಳ ಉಲ್ಲೇಖದಿಂದ ಪರಿಹರಿಸಿದೆ.)

ಅದ್ವೈತ/ಅದ್ವೈತಿ ವಿಷ್ಣುದ್ವೇಷಿಯೆ? ಬ್ರಹ್ಮ ಸೂತ್ರದ ಉತ್ಪತ್ತ್ಯಸಂಭವಾಧಿಕರಣಮ್ 2.2.42 ಭಾಷ್ಯ:

तत्र भागवता मन्यन्ते — भगवानेवैको वासुदेवो निरञ्जनज्ञानस्वरूपः परमार्थतत्त्वम् ; स चतुर्धात्मानं प्रविभज्य प्रतिष्ठितः — वासुदेवव्यूहरूपेण, सङ्कर्षणव्यूहरूपेण, प्रद्युम्नव्यूहरूपेण, अनिरुद्धव्यूहरूपेण च ; वासुदेवो नाम परमात्मा उच्यते ; सङ्कर्षणो नाम जीवः ; प्रद्युम्नो नाम मनः ; अनिरुद्धो नाम अहंकारः ; तेषां वासुदेवः परा प्रकृतिः, इतरे सङ्कर्षणादयः कार्यम् ; तमित्थंभूतं परमेश्वरं भगवन्तमभिगमनोपादानेज्यास्वाध्याययोगैर्वर्षशतमिष्ट्वा क्षीणक्लेशो भगवन्तमेव प्रतिपद्यत इति । तत्र यत्तावदुच्यते — योऽसौ नारायणः परोऽव्यक्तात्प्रसिद्धः परमात्मा सर्वात्मा, स आत्मनात्मानमनेकधा व्यूह्यावस्थित इति — तन्न निराक्रियते, ‘ स एकधा भवति त्रिधा भवति’ (छा. उ. ७ । २६ । २) इत्यादिश्रुतिभ्यः परमात्मनोऽनेकधाभावस्याधिगतत्वात् ; यदपि तस्य भगवतोऽभिगमनादिलक्षणमाराधनमजस्रमनन्यचित्ततयाभिप्रेयते, तदपि न प्रतिषिध्यते, श्रुतिस्मृत्योरीश्वरप्रणिधानस्य प्रसिद्धत्वात् ।

ಇದರಲ್ಲಿ ಪರಮಾತ್ಮನನ್ನು ಅನವರತ ಧ್ಯಾನ ಭಕ್ತಿಗಳಿಂದ ದೀರ್ಘಕಾಲ ಆರಾಧಿಸಿ ನಿರ್ದೋಷಿಯಾಗಿ ಭಗವತ್ಪ್ರಾಪ್ತಿ ಪಡೆಯುವನು ಎಂದಿದ್ದಾರೆ. ಇದನ್ನು ಸೌಗಂಧಿಕ ವನದ ಅಸುರರು ಒಪ್ಪಿದರೆ? ಭ.ಗೀತೆಯಲ್ಲಿ 'ಜಗದಾಹುರನೀಶ್ವರಂ....ಈಶ್ವರೋಽಹಂ' ಎಂಬುದು ಹೇಗೆ ಅದ್ವೈತಕ್ಕೆ ಅನ್ವಯವಾಗುತ್ತೆ? ಅದ್ವೈತದಲ್ಲಿ ಸಗುಣ ಬ್ರಹ್ಮದ ಬಕ್ತಿಯು ನಿರ್ಗುಣ ಬ್ರಹ್ಮದ ಜ್ಞಾನಕ್ಕೆ ಅಗತ್ಯವಾದ ಸಾಧನ. ಕೆಲವು ವರ್ಷಗಳ ಹಿಂದೆ 'ವಿವೇಕಚೂಡಾಮಣಿ'

ಕುರಿತಾದ 10 ದಿನದ ಕಾರ್ಯಶಾಲಾ ಆಯೋಜಿತವಾಗಿತ್ತು ಬೆಂಗಳೂರಿನ ಪೂರ್ಣಪ್ರಜ್ಞ ಸಂಶೋಧನ ಮಂದಿರದಲ್ಲಿ. ಅದರ ಸಮಾರೋಪದಲ್ಲಿ ಆಗಿನ ಪೇಜಾವರ ಶ್ರೀಗಳು ಹೇಳಿದ್ದು: 'ಮೂರೂ ಆಚಾರ್ಯರೂ ಭಗವದ್ಭಕ್ತಿಯನ್ನು ಒತ್ತಿ ಹೇಳಿದ್ದಾರೆ' ಎಂದು.

ಉಪಸಂಹಾರ:

1. ಭ.ಗೀತೆಯ ಆಸುರೀ ಸಂಪತ್ತಿನ ಶ್ಲೋಕಗಳನ್ನು ಅದ್ವೈತಕ್ಕೆ ಅನ್ವಯಿಸಿ, ಮುಂದಕ್ಕೆ ಮಣಿಮದಾದಿಗಳಿಗೂ ಅವನ್ನು ಕಲ್ಪಿಸಿದರಿಂದ ಮಹತ್ಪ್ರಯೋಜನ ಏನು, ಯಾರಿಗೆ? ಎಂಬ ಪ್ರಶ್ನೆಗಳಿಗೆ ಉತ್ತರ ವ್ಯಕ್ತವಾಗಿ ಹೇಳಬೇಕಿಲ್ಲ.
2. ಆದರೆ ಆ ಶ್ಲೋಕಗಳನ್ನು ಅದ್ವೈತಕ್ಕೆ ಅನ್ವಯಿಸುವುದು ಅದ್ವೈತ ಶಾಸ್ತ್ರದೃಷ್ಟ್ಯಾ ಅನುಕ್ತ, ಅನಭ್ಯುಪಗತವಾದದ್ದನ್ನು (ಅದ್ವೈತದಲ್ಲಿ ಪ್ರಮೇಯವಾಗಿ ಹೇಳದ, ಒಪ್ಪದ) ಹೇಳಿದ/ಖಂಡಿಸಿದ ದೋಷ ಅಪರಿಹಾರ್ಯ.
3. ಆ ಶ್ಲೋಕಗಳಿಗೆ ಅದ್ವೈತವು ವಿಷಯಭೂತವಲ್ಲ ಎಂದು ಒಪ್ಪಿದರೆ ಅದರ ದುಷ್ಪರಿಣಾಮ ಏನು, ಯಾರಿಗೆ? ಎಂಬ ಪ್ರಶ್ನೆಗಳೂ ಸ್ಪಷ್ಟೋತ್ತರಗಳೇ.
4. ಅದ್ವೈತ ಶಾಸ್ತ್ರವನ್ನು ಚೆನ್ನಾಗಿ ಅರಿತ ಕೆಲವರು ಮಾಧ್ವ ವಿದ್ವಾಂಸರು ಇದ್ದಾರೆ. ಅವರಿಗೆ ವೇದ್ಯವಾಗುತ್ತೆ ಪ್ರಕೃತ ಗೀತಾ ಶ್ಲೋಕಗಳಿಗೆ ಅದ್ವೈತವಿಷಯತ್ವ ಹೇಳಲು ಬರುವುದಿಲ್ಲ ಎಂಬುದು.

ಓಂ ತತ್ ಸತ್